# ಬೆಂಗಳೂರಿಗೊಂದು ಕಾರ್ಯಸೂಚಿ

ಬಿ.ಪ್ಯಾಕ್
ಅಂದದೂರು ಬೆಂಗಳೂರು

## ಬೆಂಗಳೂರು ರಾಜಕೀಯ ಕಾರ್ಯಕಾರಿ ಸಮಿತಿ

ಈ ಕಾರ್ಯಸೂಚಿಯ ಪಟ್ಟಿಯಲ್ಲಿ ಬಿ.ಪ್ಯಾಕ್ ಸಮಿತಿಯು ಸರಕಾರ ಹಾಗೂ ಸಮಾಜವನ್ನು ಉದ್ದೇಶಿಸಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ಇವನ್ನು ಜಾರಿಗೊಳಿಸುವುದರಿಂದ ನಗರದಲ್ಲಿ ಜನಜೀವನ ಉತ್ತಮಗೊಳ್ಳುವುದು ಎಂಬ ವಿಶ್ವಾಸವನ್ನು ಹೊಂದಿದೆ. ಉದ್ದೇಶಿತ ಗುರಿಗಳನ್ನು ಮುಟ್ಟುತ್ತಲೇ ಕಾರ್ಯಕ್ರಮಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿಸಲು ಕಾಲಕಾಲಕ್ಕೂ ಅವುಗಳ ಪುನರಾವಲೋಕನವನ್ನು ಮಾಡುತ್ತ ಸದಾ ಬದಲಾಗುತ್ತಲೇ ಇರುವ ನಗರದ ಅಗತ್ಯಗಳನ್ನು ಪೂರೈಸಲು ಸಮಿತಿಯು ಕಾರ್ಯಸೂಚಿಯನ್ನು ತಿದ್ದಬಯಸುತ್ತದೆ.

- **ನಗರಕ್ಕೆ ಸಮಂಜಸವಾದ ಶಾಸನಬದ್ಧ ಆಡಳಿತ ವ್ಯವಸ್ಥೆ:** ಸರಕಾರದ ನೀತಿ, ಯೋಜನೆ ಮತ್ತು ಆಡಳಿತ ಎಲ್ಲವೂ ಪರಸ್ಪರ ಅವಲಂಬಿತವಾಗಿ ಒಂದರಲ್ಲಿನ್ನೊಂದು ಬೆರೆತುಹೋಗಿರುತ್ತವೆ. ಇದರಿಂದ ನಗರಾಡಳಿತದಲ್ಲಿ ವಿವಿಧ ರೀತಿಯಲ್ಲಿ ತೊಡಗಿರುವ ಬೆಂಗಳೂರು ಮಹಾನಗರ ಪಾಲಿಕೆ, ರಾಜ್ಯ ಸರಕಾರ ಹಾಗೂ ಕೇಂದ್ರದ ಅಂಗಸಂಸ್ಥೆಗಳ ಪಾತ್ರಗಳಲ್ಲಿ ಕೆಲವೊಮ್ಮೆ ಗೊಂದಲಗಳು ಉಂಟಾಗುತ್ತವೆ. ಸುಧಾರಣೆ ಹಾಗೂ ನೀತಿ ನಿಯಮಗಳಲ್ಲಿ ಬದಲಾವಣೆಯನ್ನು ತಂದು ನಗರಜನಜೀವನವನ್ನು ಹೆಚ್ಚು ಪರಿಣಾಮಕಾರಿಯಾಗಿ ಉತ್ತಮಗೊಳಿಸಬೇಕೆಂದು ಸಂಸದಿನ 74ನೇ ತಿದ್ದುಪಡಿಯಲ್ಲದೆ ಕರ್ನಾಟಕ ನಗರ ಪಾಲಿಕೆಗಳ ಕಾಯಿದೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ಕಾಯಿದೆಗಳಲ್ಲಿ ಮಂಡಿತವಾಗಿದೆ. ಆದರೆ ಸುಧಾರಣ ಕ್ರಮಗಳನ್ನು ತಕ್ಕರೀತಿಯಲ್ಲಿ ಈಗಿರುವ ವ್ಯವಸ್ಥೆಯಿಂದ ನೆರವೇರಿಸಲಾಗಿಲ್ಲ.

ಈ ಕಾರಣಕ್ಕಾಗಿ ಬಿ.ಪ್ಯಾಕ್ ಲಕ್ಷ್ಯವು ಕೆಳಕಂಡ ಕೆಲವು ಉಪಾಯಗಳತ್ತ ಗಮನಹರಿಸಿದೆ:

1. **ಯೋಜನೆ ಮತ್ತು ಆಡಳಿತ ಕಾರ್ಯಗಳನ್ನು ಬೇರ್ಪಡಿಸುವುದು:** ನಿಬಂಧನಾತ್ಮಕ ಯೋಜನಾತಂತ್ರವನ್ನು ರೂಪಿಸಿ, ಪ್ರಾದೇಶಿಕ ಯೋಜನಾ ಪ್ರಾಧಿಕಾರವನ್ನು ಸ್ಥಾಪಿಸಿ ಅದರ ಮೂಲಕ ಬೆಂಗಳೂರು ನಗರದ ಎಲ್ಲಾ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಂಜೂರು ಮಾಡುವುದು.

2. **ಜವಾಬುದಾರಿಯ ನಗರಾಡಳಿತ:** ಬೆಂಗಳೂರು ಮಹಾನಗರದ ಮಹಾಪೌರರಿಗೆ, ಪಾಲಿಕೆಯ ಆಯುಕ್ತರಿಗೆ ಮತ್ತು ಇತರ ಪ್ರಮುಖ ಅಧಿಕಾರಿಗಳಿಗೆ ಅರ್ಥಪೂರ್ಣವಾದ ಅವಧಿಯನ್ನು ನೀಡಿ, ಅವರಿಗೆ ನಗರವನ್ನು ಒಂದು ನಿರ್ದಿಷ್ಟ ಯೋಜನೆಗೆ ತಕ್ಕಂತೆ ರೂಪಿಸಲು ಸರಿಯಾದ ಕಾಲಾವಕಾಶವನ್ನು ಕಲ್ಪಿಸುವುದು. ಸಂವಿಧಾನದ 74ನೇ ತಿದ್ದುಪಡಿ ಮತ್ತು ಡಾ॥ ಕೆ. ಕಸ್ತೂರಿರಂಗನ್ ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವುದು.

3. **ಬೆಂಗಳೂರು ನಗರಕ್ಕಾಗಿ ವಿಶೇಷ ಶಾಸನ:** ನಗರಾಡಳಿತ ವ್ಯವಸ್ಥೆಯನ್ನು ಬಲಪಡಿಸಲು, ನಾಗರಿಕ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಮತ್ತು ನಗರವನ್ನು ನಿರ್ವಹಿಸುವ ವ್ಯವಸ್ಥೆಗೆ ಅಧಿಕಾರವನ್ನು ವೃದ್ಧಿಸಲು ಬೆಂಗಳೂರು ಮಹಾನಗರ ಪ್ರಾದೇಶಿಕ ಆಡಳಿತ ವಿಧೇಯಕವನ್ನು ಕಾಯಿದೆಯ ರೂಪಕ್ಕೆ ತರುವುದು.

4. **ನಗರ ಶಾಸನವನ್ನು ಸರಕಾರದ ಮುಖ್ಯ ಮತ್ತು ಮೂರನೆಯ ಸ್ಥರವಾಗಿ ಕಲ್ಪಿಸುವುದು:** ಸರಕಾರದಿಂದ ರಚಿತವಾದ ನಗರಸೇವಾ ಪೂರೈಕೆಯ ಅಂಗಸಂಸ್ಥೆಗಳನ್ನು ಒಂದೇ ಪ್ರಾಧಿಕಾರದಡಿಯಲ್ಲಿ ತರುವುದು (ಉ. ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸಾರಿಗೆ, ವಿದ್ಯುತ್ ಸರಬರಾಜು, ಇತ್ಯಾದಿ). ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ಎಲ್ಲಾ ಭಾಗಗಳನ್ನು ನಿರ್ವಹಿಸಲು ಅಗತ್ಯವಾದ ಸಿಬ್ಬಂದಿ ಸೌಕರ್ಯಗಳನ್ನು ಒದಗಿಸುವುದು. ಸಿಬ್ಬಂದಿಯ ಕೊರತೆಯನ್ನು ನಗರ ಪಾಲಿಕೆಯಲ್ಲಿ ಮೇಲ್ಕಂಡ ಸರಕಾರದಿಂದ ರಚಿತವಾದ ಅಂಗ ಸಂಸ್ಥೆಗಳಲ್ಲಿ ತಡಮಾಡದೆ ಪರಿಹರಿಸಿ ನಗರಾಭಿವೃದ್ಧಿಗೆ ಅಗತ್ಯವಾದ ಅಧಿಕಾರಿಗಳ ನೇಮಕ ಮಾಡುವುದು. ರಾಜ್ಯಮಟ್ಟದಲ್ಲಿ ನಗರಾಡಳಿತಕ್ಕಾಗಿಯೇ ಪದವೃಂದವನ್ನು ಸ್ಥಾಪಿಸುವುದು ಹಾಗೂ ಅದರಿಂದಲೇ ನಗರಾಡಳಿತಕ್ಕಾಗಿ ಅಧಿಕಾರಿಗಳನ್ನು ನೇಮಿಸುವುದು.

5. **ತಜ್ಞತೆ:** ನಗರಸೇವಾ ಸಂಸ್ಥೆಗಳಲ್ಲಿ ಮಂಡಳಿಗಳಲ್ಲಿ ತಜ್ಞರನ್ನು ನೇಮಿಸಿ, ಖಾಸಗಿ ವಲಯದಿಂದ ಪರಿಣತಿ ಪಡೆದಿರುವ ವ್ಯಕ್ತಿಗಳನ್ನು ಒಳಗೊಂಡ ಸಲಹಾ ಸಮಿತಿಗಳನ್ನು ರಚಿಸುವುದು.

- **ನಗರಾಡಳಿತದಲ್ಲಿ ನಾಗರಿಕ ಪಾಲ್ಗೊಳ್ಳುವಿಕೆಯ ವರ್ಧನೆ:** ನಗರವು ದಿನೇದಿನೇ ಬೆಳೆಯುತ್ತಲೇ ಇದೆ ಮತ್ತು ಅದು ಎದುರಿಸುತ್ತಿರುವ ಸಮಸ್ಯೆಗಳೂ ಹೆಚ್ಚುತ್ತಿವೆ. ಅಲ್ಲದೆ, ನಾಗರಿಕರ ಮತ್ತು ಸರಕಾರದ ನಡುವೆ ಅಂತರ ಹೆಚ್ಚುತ್ತಿದೆ. ಈ ಸವಾಲುಗಳನ್ನು ಎದುರಿಸಲು ಬಿ.ಪ್ಯಾಕ್ ಬಡಾವಣೆಯ ಮಟ್ಟದಿಂದಲೇ ನಾಗರಿಕರು ಅಧಿಕೃತವಾಗಿ ಆಡಳಿತ ನಿರ್ಧಾರಗಳಲ್ಲಿ ಪಾಲ್ಗೊಳ್ಳಲು ಹಾಗೂ ಸಮಸ್ಯೆಗಳಿಗೆ ಪರಿಹಾರಗಳನ್ನು ರೂಪಿಸಲು ಆಗ್ರಹಿಸುತ್ತದೆ. ಇದನ್ನು ಸಾಧಿಸಲು:

1. ನಗರದ ಸಮಸ್ಯೆಗಳನ್ನು ಪರಿಹರಿಸಬಲ್ಲ ಅಗತ್ಯವಾದ ಪರಿಣತಿ ಹೊಂದಿರುವ ನಾಗರಿಕರನ್ನು ಮಹಾನಗರ ಪಾಲಿಕೆಗೆ ನೇಮಿಸಬಹುದು.

2. ಪಾಲಿಕೆಯ ಸ್ಥಾಯಿ ಸಮಿತಿಗಳಲ್ಲಿ ಪರಿಣತ ನಾಗರಿಕರನ್ನು ಸೇರಿಸುವುದು.

3. ವಾರ್ಡ್ ಮಟ್ಟದಲ್ಲಿ ಬಡಾವಣೆ ಸಮಿತಿಗಳನ್ನು ರಚಿಸಿ, ಮಾಮೂಲಿ ಕಾರ್ಯಾಚರಣೆಯಲ್ಲಿ ನಾಗರಿಕರ ಸಹಭಾಗತ್ವವನ್ನು ಹೆಚ್ಚಿಸು**ವುದು**.

- **ಸ್ಥಳೀಯ ಮತ್ತು ನಗರಸೇವಾ ಸಂಸ್ಥೆಗಳ ಹಣಕಾಸು ವ್ಯವಸ್ಥೆಯನ್ನು ಬಲಪಡಿಸುವುದು:** ಬೆಂಗಳೂರು ನಗರಕ್ಕೆ ಗಂಭೀರವಾದ ಹಣಕಾಸಿನ ಕೊರತೆ ಎದುರಾಗಿದ್ದು ಮೂಲಭೂತ ಸೌಕರ್ಯ, ಆರ್ಥಿಕ ಚಟುವಟಿಕೆಗಳು ಮತ್ತು ಸಾರ್ವಜನಿಕ ಸೇವೆಗಳ ಆರೋಗ್ಯಕ್ಕೆ ಸವಾಲಾಗಿದೆ. ರಾಜ್ಯದ ಅರ್ಥವ್ಯವಸ್ಥೆಗೆ ಬೆಂಗಳೂರು ಎಷ್ಟು ಮುಖ್ಯ ಎಂದುಕೊಂಡು ರಾಜ್ಯದ ಈ 'ಇಂಜಿನ್' ಸರಾಗವಾಗಿ ಸಾಗುವಂತೆ ನೋಡಿಕೊಳ್ಳಬೇಕಾಗಿದೆ. ನಗರದ ಆದಾಯವನ್ನು ಹೆಚ್ಚಿಸಲು ಹಲವಾರು ಕಾರ್ಯಕ್ರಮಗಳನ್ನು ಯೋಜಿಸಬೇಕಾಗಿದೆ. ಉದಾಹರಣೆಗೆ –

1. ನಗರದಲ್ಲಿ ಶೇಖರಿಸಿದ 'ಪ್ರೊಫೆಷನ್ ಟ್ಯಾಕ್ಸ್' ಮೊತ್ತ ರಾಜ್ಯ ಸರಕಾರದಿಂದ ನಗರಕ್ಕೇ

ಸಲ್ಲಬೇಕು.

2. ಮಹಾನಗರ ಪಾಲಿಕೆಯ ಇತಿಮಿತಿಯಲ್ಲಿ ಪ್ರಾಪರ್ಟಿ ವ್ಯವಹಾರದಿಂದ ಸ್ಟಾಂಪ್‌ಡ್ಯೂಟಿ ಪಡೆದಾಗ ರಾಜ್ಯ ಸರಕಾರವು ಅದರ ಅರ್ಧಭಾಗವನ್ನು ನಗರಕ್ಕೆ ಮೀಸಲಾಗಿಡಬೇಕು.

3. ಹಾಗೆಯೇ, ಪಾಲಿಕೆಯ ಇತಿಮಿತಿಯಲ್ಲಿ ಸಂಗ್ರಹಿಸಿದ 'ರೋಡ್‌ಟ್ಯಾಕ್ಸ್' ಮೊತ್ತದಲ್ಲಿ ಅರ್ಧಭಾಗ ನಗರಕ್ಕೆ ನೀಡಬೇಕು.

ಈ ರೀತಿ ನೀಡಬಹುದಾದ ಹಣವನ್ನು ನಗರದ ಮೂಲಭೂತ ಸೌಕರ್ಯವನ್ನು ಉತ್ತಮಗೊಳಿಸಲು ಮಹಾನಗರ ಪಾಲಿಕೆಗೆ ಅಥವಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಈ ಮಾದರಿಯ ಸಂಗ್ರಹಣೆ ಮತ್ತು ವಿತರಣೆಯನ್ನು ರಾಜ್ಯದ ಎಲ್ಲಾ ನಗರಗಳಲ್ಲೂ ಅವುಗಳ ಅಭಿವೃದ್ಧಿಗೆ ಅಳವಡಿಸಬಹುದು.

- **ನಗರಸೇವಾ ಸಂಸ್ಥೆಗಳಲ್ಲಿ ಜವಾಬುದಾರಿ ಪಡೆಯುವುದು:** ಬಹುಮಟ್ಟಿಗೆ ನಾಗರಿಕರಲ್ಲಿ ಈ ಸಂಸ್ಥೆಗಳ ಕಾರ್ಯಾಚರಣೆಯ ಬಗ್ಗೆ ಅಥವಾ ಅವು ನಡೆಸುತ್ತಿರುವ ಸರಿತಪ್ಪುಗಳ ಬಗ್ಗೆ ಸ್ಪಷ್ಟವಾದ ತಿಳಿವಳಿಕೆ ಇರುವುದಿಲ್ಲ. ಈ ಸಂಸ್ಥೆಗಳ ಪರಿಣಾಮಿ ಕಾರ್ಯಾಚರಣೆಯನ್ನು ಅಳೆಯಲು ನಿರ್ದಿಷ್ಟವಾದ ಅಳತೆಗೋಲುಗಳನ್ನು ಸಾಕ್ಷಿಪಡಿಸಿ ಸಾರ್ವಜನಿಕ ಪರಿಶೀಲನೆಗೆ ತರಬೇಕು, ಸಣ್ಣಮಟ್ಟ ಕಾಮಗಾರಿಯಾಗಿರಲಿ ಅಥವಾ ಒಟ್ಟು ನಗರದ ಅಭಿವೃದ್ಧಿಯ ಮಟ್ಟದಲ್ಲಾಗಲಿ. ಈ ನಿಟ್ಟಿನಲ್ಲಿ, ಬಿ.ಪ್ಯಾಕ್ ಕೇಳುತ್ತದೆ:

ಎಲ್ಲಾ ಯೋಜನೆಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳ ಸಾರ್ವಜನಿಕ ಪರಿಶೀಲನೆಗೆ ಅಗತ್ಯಕ್ರಮ.

1. ಟೆಂಡರ್ ಆಗಿ ನಡೆದ ಎಲ್ಲ ಕಾಮಗಾರಿಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ.

2. ಎಲ್ಲಾ ಯೋಜನೆಗಳ ಪ್ರಗತಿಯ ಬಗ್ಗೆಯೂ ತಪ್ಪದೆ ಕಾಲಕ್ರಮದಂತೆ ಮಾಹಿತಿ.

3. ಬೆಂಗಳೂರು ಮಹಾನಗರ ಪಾಲಿಕೆಯ ಹಾಗೂ ಇತರ ನಗರಸೇವಾ ಮಂಡಳಿ/ಸಂಸ್ಥೆಯ ಅಧಿಕಾರಿಗಳು ಕೈಗೊಂಡ ಯೋಜನೆಗಳ ಸಾಧನೆಯ ಸಾರ್ವಜನಿಕ ಪರಿಶೋಧನೆ ಹಾಗೂ ನಾಗರಿಕ ವಿಮರ್ಶೆಗೆ ಅವಕಾಶ.

4. ಸಿ.ಎ.ಜಿ ಯಿಂದ ಪ್ರತಿವರ್ಷವೂ ನಗರಪಾಲಿಕೆಯ ಲೆಕ್ಕ ಪರಿಶೋಧನೆ

5. ನಗರಪಾಲಿಕೆಯಲ್ಲಿ ಕಾಮಗಾರಿ ಯೋಜನೆಗಳ ಗುಣಮಟ್ಟವನ್ನು ನಿತ್ಯ ಸುಧಾರಿಸಲು ಉತ್ತಮಗೊಳಿಸಲು ಸಾರ್ವಜನಿಕ ಲೆಕ್ಕಪತ್ರ ಸಮಿತಿಯನ್ನು ಸ್ಥಾಪಿಸುವುದು.

**(ಚಿ) ವಿಶ್ವ ಮಟ್ಟದ ಮೂಲಭೂತ ಸೌಕರ್ಯ:** ವಿಶ್ವದ ಪ್ರಖ್ಯಾತ ಮಹಾನಗರಗಳಲ್ಲಿ ಒಂದಾಗಲು ನಮಗೆ ವಿಶ್ವ–ಮನ್ನಣೆಯ ಗುಣಮಟ್ಟದ ಮೂಲಭೂತ ಸೌಕರ್ಯದ ಅಗತ್ಯವಿದೆ. ಈಗಿರುವ ಸ್ಥಿತಿಯಲ್ಲಿ

ಗಂಭೀರವಾದ ಕೊರತೆ ನಮ್ಮ ಭೌತಿಕ ಸೌಲಭ್ಯದಲ್ಲಿ, ಜ್ಞಾನ ಸಂಪಾದನ ವಲಯದಲ್ಲಿ, ಸಾಮಾಜಿಕ ಮಟ್ಟದಲ್ಲಿ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಎದ್ದುಕಾಣುತ್ತಿದೆ. ನಮ್ಮ ಮೂಲಭೂತ ಸೌಕರ್ಯವನ್ನು ಎಲ್ಲಾ ವಲಯಗಳಲ್ಲೂ ಅಭಿವೃದ್ಧಿಗೊಳಿಸಲು ಸಮಗ್ರವಾದ ಯೋಜನೆಯನ್ನು ಕರ್ನಾಟಕ ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ಸಮಿತಿಯು ಸರಕಾರಕ್ಕೆ ಜನವರಿ 8, 2013 ರಂದು ನೀಡಿದೆ. ಈ ಯೋಜನೆಯಡಿಯಲ್ಲಿ ಶಿಫಾರಸ್ಸು ಮಾಡಿರುವ ಪ್ರತಿಕ್ರಮವನ್ನು ಸರಕಾರವು ಕೈಗೊಳ್ಳಬೇಕು ಮತ್ತು ಬರುವ 10 ವರ್ಷಗಳಲ್ಲಿ ಅನುಷ್ಠಾನಗೊಳಿಸಬೇಕು ಎಂದು ಬಿ.ಪ್ಯಾಕ್ ಆಗ್ರಹಿಸುತ್ತದೆ.

(ಛ) **ನಗರದ ರಾಜಕೀಯ ನೆಲಗಟ್ಟನ್ನು ಬಲಪಡಿಸುವುದು:**

1. **ನಗರಗಳ ಪ್ರಾತಿನಿಧ್ಯವನ್ನು ಹೆಚ್ಚಿಸುವುದು:** ಭಾರತವು ವೇಗವಾಗಿ ನಗರೀಕೃತವಾಗುತ್ತಿದ್ದರೂ, ವಿಧಾನಸಭೆ ಹಾಗೂ ಲೋಕಸಭೆಯಲ್ಲಿ ಅದೇ ಪ್ರಮಾಣದಲ್ಲಿ ಪ್ರಾತಿನಿಧ್ಯ ಹೆಚ್ಚುತ್ತಿಲ್ಲ. ಈ ತಾರತಮ್ಯವನ್ನು ಸರಿಪಡಿಸಲು ಕಾನೂನು ಹಾಗೂ ರಾಜಕೀಯ ಪ್ರಕ್ರಿಯೆಗಳನ್ನು ಬಳಸುವ ಪ್ರಯತ್ನಗಳಾಗಬೇಕು.

2. **ಚುನಾವಣೆಗಳಲ್ಲಿ ಸ್ಪರ್ಧಿಸಲು ಹಣ:** ಅಧಿಕೃತವಾಗಿ ಚುನಾವಣೆಗಳಲ್ಲಿ ಅಭ್ಯರ್ಥಿಗಳು ಖರ್ಚು ಮಾಡಬಹುದಾದ ಮಿತಿಯು ವಾಸ್ತವಕ್ಕೆ ಬದ್ಧವಾಗಿಲ್ಲ. ಇದನ್ನು ಸರಿಪಡಿಸಬೇಕು. ಅಲ್ಲದೆ, ಚುನಾವಣೆಗಳಲ್ಲಿ ಖರ್ಚಾಗುತ್ತಿರುವ ಹಣಕಾಸಿನ ಮೇಲೆ ನಿಯಂತ್ರಣವೂ ದುರ್ಬಲವಾಗಿದೆ. ಚುನಾವಣೆ ಆಯೋಗ ಮತ್ತು ನ್ಯಾಯಾಲಯಗಳಲ್ಲಿ ಈ ವಿಷಯಗಳನ್ನು ಪ್ರಸ್ತಾಪಿಸಿ ವಾಸ್ತವಕ್ಕೆ ತಕ್ಕಂತೆ ಖರ್ಚಿನ ಮಿತಿ ಮತ್ತು ನಿಯಂತ್ರಣದ ನಿಯಮಗಳನ್ನು ರೂಪಿಸಬೇಕಾಗಿದೆ. ಚುನಾವಣೆಯ ಹಿಂದಿನ ದಿನ ಈ ಕುರಿತ ಮಾಹಿತಿಯು ಸಾರ್ವಜನಿಕರ ಮುಂದಿರಬೇಕು.

**ಸಾರ್ವಜನಿಕ ಸಂಪರ್ಕ:**

ಬಿ.ಪ್ಯಾಕ್ ಪ್ರತಿಪಾದಿತ ಉದ್ದೇಶಗಳು ಫಲಿಸಲು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನಾಗರಿಕರು ಅವುಗಳನ್ನು ಅನುಮೋದಿಸಿ ಬೆಂಬಲಿಸಬೇಕಾಗಿದೆ. ಅದಕ್ಕಾಗಿ, ಬಿ.ಪ್ಯಾಕ್ ಸಾರ್ವಜನಿಕರಿಗೆ ಅಗತ್ಯವಾದ ಮಾಹಿತಿಯನ್ನು ಆಗಿಂದಾಗ್ಗೆ ಒದಗಿಸಲು ಸಂವಹನ ಸಾಧನಗಳನ್ನು ಬಳಸಿ ನಾಗರಿಕರಿಗೆ ತನ್ನ ಕಾರ್ಯಕ್ರಮಗಳ ಬಗ್ಗೆ ಅವುಗಳ ಪ್ರಗತಿಯ ಬಗ್ಗೆ ವಿವರಿಸುವ ಸಂಪರ್ಕಯೋಜನೆಯನ್ನು ರೂಪಿಸಿದೆ.

(ಚ) ಬಿ.ಪ್ಯಾಕ್ ಬೆಂಬಲಿಗರ 'ಬಿ.ಪ್ಯಾಕ್ ಸ್ನೇಹ ವೃಂದ' ಕಟ್ಟಿಕೊಂಡು ತನ್ನ ಉದ್ದಿಶ್ಯವನ್ನು ನಗರದ ಮೂಲೆಮೂಲೆಗೂ ತಲುಪಿಸುವುದು ಮತ್ತು ಆ ನಿಟ್ಟಿನಲ್ಲಿ ಹಲವಾರು ನಾಗರಿಕ ವೇದಿಕೆಗಳನ್ನು ಬಳಸುವುದು.

(ಛ) ಬಿ.ಪ್ಯಾಕ್ ವೆಬ್‌ಸೈಟ್‌ನಲ್ಲಿ ಇಂತಹ ಆಶಯಗಳನ್ನು ಹೊತ್ತವರನ್ನು ನೋಂದಾಯಿಸಿ, ಬಿ.ಪ್ಯಾಕ್ ಕೈಗೊಳ್ಳುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ಕ್ರಮವಾಗಿ ನೀಡುತ್ತ, ಅಂಥವರ ಸಹಕಾರವನ್ನು

ಪಡೆದು ಬೆಂಗಳೂರಿಗೊಂದು ಕಾರ್ಯಸೂಚಿಯನ್ನು ಪರಿಷ್ಕರಿಸುವ ದಿಕ್ಕಿನಲ್ಲಿ ಸಾಗುವುದು.

(ಛಿ) ಅದರಂತೆಯೇ ತೊಡಗಿಸಿಕೊಂಡಿರುವ ಸಂಘಟನೆಗಳೊಂದಿಗೆ ಬಿ.ಪ್ಯಾಕ್ ಕೈಜೋಡಿಸಿ ತಕ್ಕ ಕಾರ್ಯಕ್ರಮಗಳಲ್ಲಿ ಪಾಲುದಾರಿಕೆಯನ್ನು ನೀಡುವುದು.

(ಜ) ಬಿ.ಪ್ಯಾಕ್ ಒಂದು ಸಾರ್ವಜನಿಕ ಸಂವಹನ ಯೋಜನೆಯ ಅಡಿಯಲ್ಲಿ ಮಾಧ್ಯಮಕ್ಕಾಗಿ ವಿಶೇಷವಾಗಿ ತಯಾರಿಸಿದ ಮಾಹಿತಿಯನ್ನು ಒದಗಿಸುವುದು. ಬಿ.ಪ್ಯಾಕ್ ಸದಸ್ಯರು ವೈಯಕ್ತಿಕವಾಗಿಯೂ ಮಾಧ್ಯಮಗಳಲ್ಲಿ ಬೆಂಗಳೂರಿಗೊಂದು ಕಾರ್ಯಸೂಚಿಯ ಪ್ರವರ್ತಕರಾಗಿ ತೊಡಗಿಸಿಕೊಳ್ಳುವರು.

**ಬಿ.ಪ್ಯಾಕ್ ಆಡಳಿತ ವ್ಯವಸ್ಥೆ:**

(ಚಿ) ಬಿ.ಪ್ಯಾಕ್ ಕಾನೂನು ಬದ್ಧವಾಗಿ ಒಂದು ಸಾರ್ವಜನಿಕ ಹಿತಕ್ಕಾಗಿ ಟ್ರಸ್ಟ್

(ಛ) ಧರ್ಮಾದರ್ಶಿಗಳ ಮಂಡಳಿಯಲ್ಲಿ ಬಿ.ಪ್ಯಾಕ್ ಸ್ಥಾಪಕರು ಸೇರಿರುತ್ತಾರೆ.

(ಛಿ) ಆಡಳಿತ ಮಂಡಳಿಯಲ್ಲಿ ಬಿ.ಪ್ಯಾಕ್ ದಿನಚರಿಯನ್ನು ನಿರ್ವಹಿಸುವವರು ಸೇರಿದ್ದು, ಮುಖ್ಯ ಸಂಚಾಲಕರು ಹಾಗೂ ಸಿಬ್ಬಂದಿ ಸೇರಿರುತ್ತಾರೆ.

(ಜ) ಬೋಧನಾ ಮಂಡಳಿಯಲ್ಲಿ ನಗರದ ಗಣ್ಯರು ಧೀಮಂತ ಸಾಧಕರು ಸೇರಿದ್ದು ಬಿ.ಪ್ಯಾಕ್ ರಚನೆಗೆ ಭದ್ರ ಬುನಾದಿ ನೀಡಿ ಸಾರ್ವಜನಿಕ ಚಿಂತನೆಗೆ ನೆರವಾಗಿ ಅದರ ಯೋಜನೆಗಳಿಗೆ ಮನ್ನಣೆ ದೊರಕಿಸಲು ಸಹಾಯವಾಗುತ್ತಾರೆ.

ಬಿ.ಪ್ಯಾಕ್ ಕಛೇರಿ
#4/6, ನೆಲ ಮಹಡಿ, ಹೈ ಗ್ರೌಂಡ್ಸ್, ಮಿಲ್ಲರ್ಸ್ ರಸ್ತೆ,
ವಿಕ್ರಂ ಆಸ್ಪತ್ರೆಯ ಮುಂದೆ,
ಬೆಂಗಳೂರು 560052
ದೂ : +91-80-41521797
ಇಮೇಲ್: forbangalore@bpac.in